ಅ) ಮೀನುಗಾರಿಕಾ ರಸ್ತೆಗಳ ಸುಧಾರಣೆಗೆ ತೆಗೆದುಕೊಂಡ ಕ್ರಮಗಳು ಯಾವುವು?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬಂದರು ಮತ್ತು ಮೀನುಗಾರಿಕೆ ಸಚಿವರು) :

ಅ) ಕಾರವಾರ ಬಂದರನ್ನು ಜಂಟಿ ರಂಗದಲ್ಲಿ 85.00 ಕೋಟಿ ರೂ.ಗಳ ಅಂದಾಜಿನಲ್ಲಿ ಅಭಿವೃದ್ಧಿಪಡಿಸಲು ಹಾಗೂ ಬೇಲಿಕೇರಿ ಮತ್ತು ತದಡಿ ಬಂದರುಗಳನ್ನು ಖಾಸಗಿ ಬಂಡವಾಳ ಹೂಡಿಕೆಯಿಂದ ಕೇಂದ್ರ ಸರ್ಕಾರದ ಆರ್ಥಿಕ ಕೈಗಾರಿಕೆ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿಯ ಉಧಾರೀಕರಣ ನೀತಿಯಲ್ಲಿ ಅಭಿವೃದ್ಧಿಪಡಿಸಲು ಯೋಜನೆಗಳನ್ನು ರೂಪಿಸಲಾಗಿದೆ.

ಆ) ಪ್ರತಿ ವರ್ಷ ಅನುದಾನ ಲಭ್ಯತೆಗನುಗುಣವಾಗಿ ಕರಾವಳಿ ಜಿಲ್ಲೆಗಳ ಮೀನುಗಾರಿಕಾ ರಸ್ತೆಗಳ ಸುಧಾರಣೆಗೆ ಅನುದಾನ ಒದಗಿಸಿ, ಲೋಕೋಪಯೋಗಿ ಇಲಾಖೆಯ ಮೂಲಕ ನಿರ್ಮಿಸಿ ನಿರ್ವಹಿಸಿಕೊಂಡು ಬರಲಾಗುತ್ತಿದೆ. ಇದಲ್ಲದೆ ನಬಾರ್ಡ್ ಸಾಲ ಸಹಾಯದ ಆರ್ ಐಡಿಎಫ್-3ರಲ್ಲಿ 4 ಮೀನುಗಾರಿಕಾ ರಸ್ತೆಗಳು ಮತ್ತು 1 ಸೇತುವೆ ಕಾಮಗಾರಿ ಮಂಜೂರಾಗಿದೆ. ಅಲ್ಲದೆ ಸರ್ಕಾರವು ಕಳೆದ 3 ವರ್ಷಗಳಲ್ಲಿ ಮೀನುಗಾರಿಕಾ ರಸ್ತೆಗಳಿಗೆ ಈ ಕೆಳಗಿನಂತೆ ಖರ್ಚು ಮಾಡಿದೆ.

ಜಿಲ್ಲೆ	*1995-96*	*1996-97*	*1997-98 (ಲಕ್ಷಗಳಲ್ಲಿ)*
ದಕ್ಷಿಣ ಕನ್ನಡ	22.56	23.93	12.41
ಉತ್ತರ ಕನ್ನಡ	9.40	28.07	12.30

ಹಾಗೂ ಪ್ರಸ್ತುತ ಸಾಲಿಗೆ ದಕ್ಷಿಣ ಕನ್ನಡದ ಜಿಲ್ಲೆಗೆ 12.00 ಲಕ್ಷ ರೂ.ಗಳು ಉತ್ತರ ಕನ್ನಡ ಜಿಲ್ಲೆಗೆ 8.00 ಲಕ್ಷ ರೂ.ಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ.

ರಾಜ್ಯದಲ್ಲಿ ಜಾನುವಾರು ಜನಗಣತಿ ಮತ್ತು ಆಸ್ಪತ್ರೆಗಳು

2336 - **ಶ್ರೀ ಕೆ. ವಿರೂಪಾಕ್ಷಪ್ಪ (ಸಿಂಧನೂರು) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?**

ಅ) ಜಾನುವಾರು ಜನಗಣತಿಯನ್ನು ಎಷ್ಟು ವರ್ಷಕ್ಕೊಮ್ಮೆ ಕೈಗೊಳ್ಳಲಾಗುವುದು. ಕಳೆದ ಜನಗಣತಿ ಯಾವ ವರ್ಷದಲ್ಲಿ ಮುಗಿಸಲಾಗಿದೆ. ಅದರನ್ವಯ ಪ್ರತಿ ಪ್ರಾಣಿ ವರ್ಗಗಳ ಸಂಖ್ಯೆ ಎಷ್ಟಿದೆ? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಎಷ್ಟು ಜಾನುವಾರುಗಳಿಗೆ ಒಂದು ಆಸ್ಪತ್ರೆ ಇರಬೇಕೆಂದು ಸರ್ಕಾರಿ ನಿಗಧಿಪಡಿಸಿದೆ; ಅದರಂತೆ ಆಸ್ಪತ್ರೆಗಳನ್ನು ಪ್ರಾರಂಭಿಸಲಾಗಿದೆಯೇ? ಹಾಗಿಲ್ಲದಿದ್ದಲ್ಲಿ ಕಾರಣಗಳೇನು?

ಇ) ರಾಜ್ಯದಲ್ಲಿ ಯಾವ ಯಾವ ಪ್ರಾಣಿಯ ಜಾನುವಾರು (ಪಶು) ಆಸ್ಪತ್ರೆಗಳಿಗೆ ಅವು ಎಲ್ಲೆಲ್ಲಿ ಇವೆ? ಪ್ರತಿಯೊಂದು ಆಸ್ಪತ್ರೆಗೆ ಉಚಿತವಾಗಿ ಔಷಧಕ್ಕಾಗಿ ಎಷ್ಟು ಹಣವನ್ನು ಸರ್ಕಾರ ಬಿಡುಗಡೆ ಮಾಡುತ್ತಲಿದೆ, ಈ ರೀತಿ ಬಿಡುಗಡೆ ಮಾಡುತ್ತಿರುವ ಹಣದ ಮೊತ್ತವನ್ನು ಹೆಚ್ಚಿಸಲು ಸರ್ಕಾರ ಯೋಚಿಸಿದೆಯೇ?

ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ನಮ್ಮ ದೇಶಾದ್ಯಂತ ಎಲ್ಲಾ ರಾಜ್ಯಗಳಲ್ಲಿ 5 ವರ್ಷಕ್ಕೊಮ್ಮೆ ಜಾನುವಾರು ಗಣತಿಯನ್ನು ಮಾಡಲಾಗುತ್ತಿದೆ. 16ನೇ ಪಂಚವಾರ್ಷಿಕ ಗಣತಿಯನ್ನು 1997ರ ಸೆಪ್ಟೆಂಬರ್-ಅಕ್ಟೋಬರ್ ಮಾಹೆಯಲ್ಲಿ ನಡೆಸಿ ಮುಗಿಸಲಾಗಿದೆ. ರಾಜ್ಯದ 20 ಜಿಲ್ಲೆಗಳ ವಿವಿಧ ಪ್ರಾಣಿಗಳ ತಾತ್ಕಾಲಿಕ ಸಂಖ್ಯೆಯನ್ನು ಅನುಬಂಧ-1ರಲ್ಲಿ ನೀಡಲಾಗಿದೆ. (7 ಹೊಸ ಜಿಲ್ಲೆಗಳನ್ನು ಸೇರಿಕೊಂಡು ಈ ಅಂಕಿ ಅಂಶಗಳನ್ನು ವಿಂಗಡಿಸಿ ನೀಡಲು ಕ್ರಮ ಕೈಗೊಳ್ಳಲಾಗಿದೆ).

ಆ) ಭಾರತ ಸರ್ಕಾರದ ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸ್ಸಿನಂತೆ ಪ್ರತಿ 5000 ದನಗಳ ಘಟಕಗಳಿಗೆ (ಒಂದು ದನದ ಘಟಕ-1 ದನ, ಎಮ್ಮೆ, 10 ಕುರಿ, ಮೇಕೆ, 3 ಹಂದಿ ಮತ್ತು 100 ಕೋಳಿಗಳು). ಒಂದು ಆಸ್ಪತ್ರೆಯನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ರಾಜ್ಯದಲ್ಲಿ 3 ಹಂತದ ಪಶುವೈದ್ಯ ಆಸ್ಪತ್ರೆಗಳಿವೆ

1.	ಪಶು ಆಸ್ಪತ್ರೆ	244
2.	ಪಶುಚಿಕಿತ್ಸಾಲಯ	803
3.	ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ	2018
	ಒಟ್ಟು	**3065**

ಮೇಲ್ಕಂಡ ಆಸ್ಪತ್ರೆಗಳಲ್ಲಿ ಎಲ್ಲಾ ವಿಧವಾದ ಜಾನುವಾರುಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ.

ಔಷಧಿಗಾಗಿ ನಿಗಧಿಪಡಿಸಿರುವ ಮೊತ್ತ :

1.	ಪಶು ಆಸ್ಪತ್ರೆ	ರೂ. 20,000-00
2.	ಪಶು ಚಿಕಿತ್ಸಾಲಯ	ರೂ. 15,000-00
3.	ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ	ರೂ. 10,000-00

ರಾಜ್ಯಕ್ಕೆ ಔಷಧಿ ಮತ್ತು ರಾಸಾಯನಿಕಗಳಿಗಾಗಿ ನಿಗಧಿಪಡಿಸಿದ ವಂಟನ :

97-98	*98-99*
ರೂ. 443.00 ಲಕ್ಷಗಳು	ರೂ. 465.50 ಲಕ್ಷಗಳು

1997-98ನೇ ಸಾಲಿನಲ್ಲಿ ಒದಗಿಸಲಾದ ಮೊತ್ತಕ್ಕಿಂತಲೂ 22.50 ಲಕ್ಷಗಳನ್ನು ಹೆಚ್ಚುವರಿಯಾಗಿ 1998-99ನೇ ಸಾಲಿನಲ್ಲಿ ಒದಗಿಸಲಾಗಿದೆ ಹೀಗೆ ಪ್ರತಿ ವರ್ಷ ಸದರಿ ಉದ್ದೇಶಕ್ಕಾಗಿ ಒದಗಿಸಲಾಗುವ ಅನುದಾನವನ್ನು ಹೆಚ್ಚಿಸಲು ಕ್ರಮ ವಹಿಸಲಾಗುವುದು.

Districtwise provisional figures of 16th Livestock census (1997) of Karnataka

Livestock

(In Nos.)

Sl. No.	Districts	Cattle	Buffaloes	Sheep	Goats	Pigs	Rabbit	Dogs	others **	Total Livestock	Total Poultry
1	2	3	4	5	6	7	8	9	10	11	12
1.	Bangalore Rural	469679	92855	335607	182436	6000	495	70899	931	1158902	1284792
2.	Bangalore Urban	182266	25711	119627	39686	6881	1110	121992	526	497799	1402214
3.	Belgaum	512634	651564	904870	437424	30457	409	112626	8135	2658119	918130
4.	Bellary	444408	211126	458623	215676	20753	100	54271	1419	1406376	985238
5.	Bidar	276704	149508	68789	111937	12195	203	28517	2377	650230	539487
6.	Bijapur	516829	349002	595980	612966	48334	86	104389	3339	2230925	787052
7.	Chickmagalur	362764	111663	74747	43735	11403	505	63563	354	668774	352731
8.	Chitradurga	459080	261137	838839	275726	8805	324	79816	5813	1929540	429955
9.	Dakshina Kannada	722634	131716	424	25587	19900	724	311420	8	1212413	2153044
10.	Dharwad	724607	287957	491184	323702	13907	239	105839	1776	1949211	857844
11.	Gulbarga	815651	208453	447496	569654	24561	28	84381	2922	2155146	734995
12.	Hassan	615161	203646	202422	111018	9179	659	82866	1329	1226280	760307

1	2	3	4	5	6	7	8	9	10	11	12
13.	Kodagu	137510	43291	830	6940	42198	442	57330	48	288589	333484
14.	Kolar	526639	147359	718858	158646	29609	713	129177	1027	1712028	1023392
15.	Mandya	340950	212979	367393	241476	11418	272	51932	475	1226895	1077835
16.	Mysore	831676	128163	341919	236109	4790	645	91896	600	1635798	1439095
17.	Raichur	655178	242958	543912	366302	19169	266	84709	1215	1913709	924229
18.	Shimoga	752119	294763	54932	113225	5042	705	124125	492	1345403	1003767
19.	Tumkur	578305	259622	874598	364627	19836	1343	141451	8801	2248583	876204
20.	Uttara Kannada	323628	113129	1948	14973	2356	217	83074	66	539391	554982
	State Total:	**10248422**	**4126602**	**7442998**	**4451885**	**346793**	**9485**	**1984273**	**41653**	**28652111**	**18438777**

** Include Horses, Ponies, Camels & Donkeys.